**ನಗರದ ಯಾವುದೇ ಭಾಗದಲ್ಲಿ ನಿಂತು ನೋಡಿದರೂ ಮಿರಮಿರ ಮಿಂಚುವ ಬಂಗಾರದ ಹೊದಿಕೆಯ ಗುಮ್ಮಟವೊಂದು ಕಣ್ಣಿಗೆ ರಾಚುತ್ತದೆ. ಅದನ್ನು ಡೋಮ್ ಆಫ್ ದಿ ರಾಕ್ ಎಂದು ಕರೆಯುತ್ತಾರೆ.**

ಪ್ರತೀ ಕದಲಿಕೆ ಜಗತ್ತಿನಾದ್ಯಂತ ಸುದ್ದಿಯಾಗುತ್ತದೆ. 'ದೇಶ–ವಿದೇಶಗಳ 800ಕ್ಕೂ ಹೆಚ್ಚು ಮಾಧ್ಯಮ ಪ್ರತಿನಿಧಿಗಳು ಇಲ್ಲಿ ಸುದ್ದಿ ಹೆಕ್ಕುವ ಕಾಯಕದಲ್ಲಿ ನಿರತರಾಗಿದ್ದಾರೆ' ಎಂದು ಸುದ್ದಿ ಸಂಸ್ಥೆಯೊಂದರ ಪ್ರತಿನಿಧಿಯಾಗಿ ಇಲ್ಲಿ ನೆಲೆಸಿರುವ ಭಾರತದ ಪತ್ರಕರ್ತರೊಬ್ಬರು ವಿವರಿಸಿದರು. ಜೆರುಸಲೇಂ ಆ ಮಟ್ಟಿಗೆ ಸುದ್ದಿಯ ಕುದಿಬಿಂದುವಾಗಿದೆ.

ತಂಪುಹವೆಗೆ ಮೈಯೊಡ್ಡಿ ಸುಣ್ಣದ ಕಲ್ಲುಹಾಸಿನ ಮೇಲೆ ಕಾಲೂರುತ್ತ ಹಳೆ ನಗರದ ಬೀದಿಗಳಲ್ಲಿ ರಾತ್ರಿ ವೇಳೆ ಅಡ್ಡಾಡುವುದೇ ಒಂದು ವಿಶಿಷ್ಟ ಅನುಭೂತಿ. ರಾಜರ ಕಾಲದ ಸಿನಿಮಾ ಸೆಟ್‌ನಂತೆ ಭಾಸವಾಗುತ್ತವೆ ಹಾದಿಬೀದಿಗಳು. ಸ್ವಚ್ಛತೆಗೆ ಅಗ್ರಮಣೆ. ರಸ್ತೆಗಳನ್ನು ಚೆಂದವಾಗಿ ಇಟ್ಟಿದ್ದಾರೆ. ಗುಂಡಿಗಳ ಕಾಟ ಇಲ್ಲ. ಯಾರೇ ಆಗಲಿ ತಲೆತೂಗುವ ಮಟ್ಟಿಗೆ ಇದೆ ನಿರ್ವಹಣೆ. ಭಾರತೀಯರನ್ನು ಕಂಡರೆ ಆತ್ಮೀಯ ನಗೆ ಸೂಸಿ, ದೇಶದ ಯಾವ ಭಾಗದವರು ಅಂತ ವಿಚಾರಿಸುತ್ತಾರೆ. 'ನಮ್ಮದು ಪುಟ್ಟ ರಾಷ್ಟ್ರ. ನಿಮ್ಮದು ಬೃಹತ್ ದೇಶ' ಎಂಬ ಉದ್ಗಾರ ಸಾಮಾನ್ಯ. ನಮ್ಮ ಪ್ರಧಾನಿ ನರೇಂದ್ರ ಮೋದಿ ಮತ್ತು ಅಲ್ಲಿನ ನೇತಾರ ಬೆಂಜಮಿನ್ ನೆತನ್ಯಾಹು ನಡುವಣ ಸ್ನೇಹವನ್ನು ಕೆಲವರು ನೆನೆಯುತ್ತಾರೆ. ಮೋದಿ ಅವರು 2017ರ ಜುಲೈನಲ್ಲಿ ಇಸ್ರೇಲ್‌ಗೆ ಭೇಟಿ ನೀಡಿದ್ದರು. ಈ ನಾಡಿಗೆ ಭೇಟಿ ನೀಡಿದ ಭಾರತದ ಮೊದಲ ಪ್ರಧಾನಿ.

ಮುಸ್ಲಿಂ ಸಮುದಾಯವು ಮೂರನೇ ಅತಿ ಪವಿತ್ರ ಎಂದು ಭಾವಿಸುವ ಅಲ್ ಅಕ್ಸಾ ಮಸೀದಿಯು ಪೂರ್ವ ಜೆರುಸಲೇಂನಲ್ಲಿದೆ. ಜಗತ್ತಿನ ಬೇರೆ ಬೇರೆ ಭಾಗಗಳ ಮುಸ್ಲಿಮರು ಇಲ್ಲಿಗೆ ಭೇಟಿ ನೀಡುತ್ತಾರೆ. ಯಹೂದಿಯರಿಗೆ ಪವಿತ್ರವಾಗಿರುವ 'ಗೋಳಿನಗೋಡೆ' ಹಾಗೂ ಅವರ ಪೂರ್ವಜರ ಸಮಾಧಿಗಳು ಇಲ್ಲಿವೆ. ಏಸು ವಿಚಾರಣೆಗೆ ಒಳಗಾದ, ಲಾಸ್ಟ್‌ಸಪ್ಪರ್ ಪೂರೈಸಿದ, ಶಿಲುಬೆಗೇರಿದ ಊರು ಎನ್ನುವ ಕಾರಣಕ್ಕೆ ಕ್ರೈಸ್ತರಿಗೆ ಪವಿತ್ರ. ಚರ್ಚ್, ಮಸೀದಿ ಮತ್ತು ಸಿನಗಾಗ್ ಶಿಖರಗಳು ನಗರದ ಎಲ್ಲೇ ನಿಂತು ನೋಡಿದರೂ ಕಾಣಸಿಗುತ್ತವೆ.

ಮೂರು ಸಾವಿರ ವರ್ಷಗಳ ಹಿಂದೆ ನಿರ್ಮಿಸಿದರೆನ್ನಲಾದ ಆರಾಧನಾಲಯದ ಸ್ಥಳದಲ್ಲಿ ಉಳಿದಿರುವ ಏಕೈಕ ರಚನೆ 'ಗೋಳಿನಗೋಡೆ'. ಇದನ್ನು ವೆಸ್ಟರ್ನ್ ವಾಲ್ ಎಂದೂ ಕರೆಯುತ್ತಾರೆ. ಪ್ರತಿವರ್ಷ ಅಸಂಖ್ಯ ಯಹೂದಿಯರು ಇಲ್ಲಿಗೆ ಬರುತ್ತಾರೆ. ಮನದ ಹಾರೈಕೆ, ಪ್ರಾರ್ಥನೆಯನ್ನು ಒಂದು ತುಂಡು ಕಾಗದದಲ್ಲಿ ಬರೆದು ಅದನ್ನು ಗೋಡೆಯ ಬಿರುಕುಗಳಲ್ಲಿ ಸಿಲುಕಿಸುತ್ತಾರೆ. ತಮ್ಮ ಕೋರಿಕೆಯನ್ನು ದೈವಸನ್ನಿಧಿಗೆ ರವಾನಿಸುವ ಮಾರ್ಗವಿದು ಎಂಬುದು ಅವರ ನಂಬಿಕೆ. ಸುಣ್ಣದ ಕಲ್ಲಿನ ಗೋಡೆಗೆ ಹಣೆ ತಾಕಿಸಿ ದೇವರಲ್ಲಿ ಮೊರೆ ಇಡುತ್ತಾರೆ.

ಧರ್ಮಕ್ಷೇತ್ರವಾಗಿ, ವಣಿಕ ಪಥವಾಗಿ ಮೆರೆದಂತಹ ಈ ನಗರ, ಮನುಕುಲದ ನೆತ್ತರುದಾಹಕ್ಕೂ, ನೆಲ–ನೀರನ್ನು ಹಂಚಿಕೊಂಡು ಬದುಕಲಾರದಂತಹ ಮನುಷ್ಯನ ಮಿತಿಗಳಿಗೂ ಸಾಕ್ಷಿಯಾಗಿ ನಿಂತಿದೆ. ನೂರಾರು, ಸಾವಿರಾರು ವರ್ಷಗಳ ಸಂಘರ್ಷದ ಚರಿತ್ರೆಯನ್ನೂ ಒಡಲಲ್ಲಿ ಇರಿಸಿಕೊಂಡಿದೆ. ದೇವರು ಒಬ್ಬನೇ ಎಂದು ಸಾರುವ ಧರ್ಮಗಳ ಅನುಯಾಯಿಗಳು ಕಟ್ಟಡಗಳಿಗಾಗಿ, ಒಂದಷ್ಟು ನೆಲಕ್ಕಾಗಿ ಬಡಿದಾಡುತ್ತಿರುವುದು ವಿಪರ್ಯಾಸವೇ ಸರಿ. ಈ ಚಾರಿತ್ರಿಕ ನಗರವು ಎಲ್ಲ ಬಗೆಯ 'ಬೇಲಿ'ಗಳನ್ನು ಕೆಡವಿಕೊಂಡರೆ ಅದರ ಚೆಲುವು ಇನ್ನಷ್ಟು ಹೊಳಪು ಪಡೆದುಕೊಂಡೀತು.

(ಲೇಖಕರು ಇಸ್ರೇಲ್‌ನ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಆಹ್ವಾನದ ಮೇರೆಗೆ ಭೇಟಿ ನೀಡಿದ್ದರು)



ಜೆರುಸಲೇಂ ಹಳೆಯ ನಗರದ ಕಲ್ಲಿನ ಕಟ್ಟಡಗಳ ನಿರ್ಜನ ಬೀದಿ.

'ಗೋಳಿನ ಗೋಡೆ'ಗೆ ಮೊರೆಯಿಟ್ಟು ಪ್ರಾರ್ಥಿಸುತ್ತಿರುವ ನಾಗರಿಕರು.

